# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

"ಸಾರಿಗೆ ಭವನ" ಕೇಂದ್ರ ಕಛೇರಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು 560027

ಸಂಚಾರ (ಕಾರ್ಯಾಚರಣೆ) ಇಲಾಖೆ

ಸಂ.ಕರಾಸಾ/ಕೇಕ/ಸಂ/ಅಪ/404/ 3198 /2020-21 ದಿನಾಂಕ: 10/03/2021

## ಸುತ್ತೋಲೆ:1599

ವಿಷಯ: ಅಪಘಾತ ಪ್ರಕರಣಗಳ ಸ್ವರೂಪದ ವರ್ಗೀಕರಣದ ಕುರಿತು.

ಉಲ್ಲೇಖ: 1. ಸುತ್ತೋಲೆ ಸಂಖ್ಯೆ 594 ದಿ;12.02.1992.

2. ಸುತ್ತೋಲೆ ಸಂಖ್ಯೆ 812 ದಿ;31.08.2001.

3. ಸೂಕ್ತಾಧಿಕಾರಿಗಳ ಆದೇಶ ದಿನಾಂಕ:16.02.2021

& % &

ಅಪಘಾತ ಪ್ರಕರಣಗಳ ವರ್ಗೀಕರಣ ಕುರಿತಂತೆ ಸುತ್ತೋಲೆ ಸಂಖ್ಯೆ 812 ಅನ್ನು ದಿ:31.08.2001 ರಲ್ಲಿ ಹೊರಡಿಸಲಾಗಿದ್ದು, ಸದರಿ ಸುತ್ತೋಲೆಯಲ್ಲಿ "ವ್ಯಕ್ತಿ/ವ್ಯಕ್ತಿಗಳು ಗಂಭೀರ ಸ್ವರೂಪದ ಗಾಯಗಳಿಗೆ ತುತ್ತಾಗಿ ಇವರುಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸುವುದು ಮತ್ತು ಆಸ್ತಿಪಾಸ್ತಿ ನಷ್ಟ ರೂ.20,000/- ಮೀರುವುದು ಅಥವಾ ಎರಡೂ ಪ್ರಕ್ರಿಯೆ ಒಳಗೊಂಡಿದ್ದಲ್ಲಿ" ಗಂಭೀರ ಪ್ರಕರಣವೆಂದು ಪರಿಗಣಿಸುವಂತೆ ತಿಳಿಸಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ವಾಹನಗಳ ಕಚ್ಚಾ ಸಾಮಗ್ರಿಗಳ ಬೆಲೆ, ಕಾರ್ಮಿಕ ವೆಚ್ಚ ಹಾಗೂ ಗಾಯಾಳುಗಳಿಗೆ ನೀಡುವ ಚಿಕಿತ್ಸಾ ವೆಚ್ಚವು ಹೆಚ್ಚಾಗಿದ್ದು, ಖರ್ಚು ವೆಚ್ಚಕ್ಕೆ ಅನುಗುಣವಾಗಿ ಅಪಘಾತ ಪ್ರಕರಣಗಳ ವರ್ಗೀಕರಣವನ್ನು ಈ ಕೆಳಕಂಡಂತೆ ವರ್ಗೀಕರಿಸಲು ಸೂಕ್ತಾಧಿಕಾರಿಗಳು ಅನುಮೋದಿಸಿರುತ್ತಾರೆ.

ಈ ಅಪಘಾತ ಪ್ರಕರಣಗಳ ವರ್ಗೀಕರಣವು ಕೆಳಕಂಡಂತಿದೆ.

1. ಮಾರಣಾಂತಿಕ **(Fatal Accidents):** ಈ ಮಾದರಿಯ ಅಪಘಾತದಲ್ಲಿ ವ್ಯಕ್ತಿ/ವ್ಯಕ್ತಿಗಳ ಮೃತ್ಯು ಸಂಭವಿಸಿರುತ್ತದೆ.
2. ಗಂಭೀರ/ಭಾರೀ ಪ್ರಮಾಣದ ಅಪಘಾತ **(Major Accidents):**
   a. ಈ ಮಾದರಿಯ ಅಪಘಾತಗಳಲ್ಲಿ ಸಾವು ಸಂಭವಿಸುವುದಿಲ್ಲ; ಬದಲಿಗೆ ವ್ಯಕ್ತಿ/ವ್ಯಕ್ತಿಗಳು ಅಪಘಾತದಲ್ಲಿ ಗಂಭೀರ ಸ್ವರೂಪವಾಗಿ ಗಾಯಗೊಂಡಿದ್ದು, ಅಪಘಾತದ ವೈದ್ಯಕೀಯ ಚಿಕಿತ್ಸಾ ವೆಚ್ಚವು ರೂ.50,000/- ಮೀರಿದ್ದಲ್ಲಿ.

   b. ವಾಹನಗಳ ದುರಸ್ಥಿ ವೆಚ್ಚ:
      - ಸಾಮಾನ್ಯ ವಾಹನಗಳಿಗೆ (ರಾಜಹಂಸ/ನಾನ್ ಎ.ಸಿ.ಸ್ಲೀಪರ್ ಒಳಗೊಂಡಂತೆ) ರೂ.50,000/- ಮೀರಿದ್ದಲ್ಲಿ.

   c. ಪ್ರತಿಷ್ಟಿತ ವಾಹನಗಳಿಗೆ ರೂ.2,00,000/- ಮೀರಿದ್ದಲ್ಲಿ.

   d. ಆಸ್ತಿಪಾಸ್ತಿ ನಷ್ಟದ ಮೊತ್ತ ರೂ.50,000/- ಮೀರಿದ್ದಲ್ಲಿ.
3. ಸಾಮಾನ್ಯ ಅಪಘಾತ **(Minor Accidents)**: ಈ ಮಾದರಿ ಅಪಘಾತವು ಮಾರಣಾಂತಿಕ ಅಥವಾ ಭಾರೀ ಪ್ರಮಾಣದ ಅಪಘಾತವಾಗಿರುವುದಿಲ್ಲ

ಈ ಮೇಲಿನ ಅಂಶಗಳನ್ನು ಅಳವಡಿಸಿಕೊಂಡು ಅಪಘಾತ ಪ್ರಕರಣಗಳ ವರ್ಗೀಕರಣ ಮಾಡುವ ಸಂಬಂಧ ಸೂಕ್ತ ಕ್ರಮಕೈಗೊಳ್ಳುವುದು.

ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ)

ಪ್ರತಿಯನ್ನು: 1. ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂ.ಮ.ಸಾ.ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ ಮತ್ತು ಈ.ಕ.ರ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

2. ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

3. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ., ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.